ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್ ಇವರು ನಿಯಮ 72ರ ಮೇರೆಗೆ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸಹಕಾರ ಸಚಿವರ ಹೇಳಿಕೆ.

**ವಿಷಯ: ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧೀನದಲ್ಲಿ ಬರುವ ನಗರದ ಪಕ್ಕದ ನೆಲ್ಲಿಕಾಯಿ ರಸ್ತೆಗೆ ತಾಗಿಕೊಂಡಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಸೇರಿದ 1.45 ಎಕರೆ ಜಾಗದಲ್ಲಿ ಕೇವಲ ಅಲ್ಪ ಭಾಗ ಮಾತ್ರ ಕಟ್ಟಡವಿದ್ದು, ಉದ್ದೇಶಿತ ಅವಶ್ಯಕತೆಗೆ ಉಪಯೋಗವಾಗದೆ ನಿರುಪಯುಕ್ತವಾಗಿದ್ದು ಹಾಗೂ ಮೂಡಬಿದ್ರೆ ಬಸ್‌ಸ್ಟಾಂಡ್ ಪಕ್ಕದಲ್ಲಿನ ಎ.ಪಿ.ಎಂ.ಸಿ. ಅನುದಾನದಲ್ಲಿ ನಿರ್ಮಿಸಿರುವ ಕಟ್ಟಡವು ಸಹ ಅಗತ್ಯ ಉದ್ದೇಶಕ್ಕೆ ಬಳಕೆಯಾಗದೇ ಅನ್ಯ ಉದ್ದೇಶಕ್ಕೆ ಬಳಕೆಯಾಗಿದ್ದು, ಇದರಲ್ಲಿ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಈ ಬಗ್ಗೆ ತನಿಖೆ ನಡೆಸುವುದರ ಬಗ್ಗೆ.**

** * **

ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನೆಲ್ಲಿಕಾಯಿ ರಸ್ತೆಯಲ್ಲಿರುವ 1.45 ಎಕರೆ (5867.94 ಚ.ಮೀ) ಜಾಗದಲ್ಲಿ 1867.ಚ.ಮೀ. ಜಾಗದಲ್ಲಿ ಕಾರ್ಯದರ್ಶಿ/ಸಿಬ್ಬಂದಿ ವಸತಿ ಗೃಹಗಳು, ವಾಣಿಜ್ಯ ಕಟ್ಟಡ, ಜೀಪ್ ಶೆಡ್ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಉಳಿದ 4000.67 ಚ.ಮೀ. ಜಾಗ ಖಾಲಿ ಇದೆ.

ಈ ಹಿಂದೆ ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಡಳಿತ ಕಛೇರಿಯು ನೆಲ್ಲಿಕಾಯಿ ರಸ್ತೆಯಲ್ಲಿನ 1.45 ಎಕರೆ ಜಾಗದಲ್ಲಿ ಸ್ಥಾಪನೆಯಾಗಿದ್ದು, ಅಲ್ಲಿ ಯಾವುದೇ ವ್ಯಾಪಾರ ವಹಿವಾಟು ನಡೆದಿರುವುದಿಲ್ಲ. ವ್ಯಾಪಾರಸ್ಥರು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಬಂದರು ಪ್ರದೇಶದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುತ್ತಾರೆ. ನಂತರದಲ್ಲಿ 1997ರಲ್ಲಿ ಬೈಕಂಪಾಡಿ ಮಾರುಕಟ್ಟೆ ಪ್ರಾಂಗಣಕ್ಕೆ ವ್ಯಾಪಾರ ವಹಿವಾಟು ಸ್ಥಳಾಂತರಗೊಂಡಿರುತ್ತದೆ. ನೆಲ್ಲಿಕಾಯಿ ರಸ್ತೆಯಲ್ಲಿನ ಸಮಿತಿ ಜಾಗವು ಮಂಗಳೂರು ನಗರದ ಹೃದಯ ಭಾಗದಲ್ಲಿದ್ದು, ಸದರಿ ಜಾಗದಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿರುವುದಿಲ್ಲವಾದ್ದರಿಂದ ಸಮಿತಿಯ ಆರ್ಥಿಕ ಹಿತದೃಷ್ಟಿಯಿಂದ ಪ್ರಸ್ತುತ ಇರುವ ಕಟ್ಟಡಗಳನ್ನು ನೆಲಸಮ ಮಾಡಿ ಒಟ್ಟಾರೆ 1.45 ಎಕರೆ ಜಾಗವನ್ನು ವಾಣಿಜ್ಯ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಅಗತ್ಯ ಕ್ರಮ ವಹಿಸಲಾಗುತ್ತಿದೆ.

ಮಂಗಳೂರು ಸಮಿತಿಯ ವ್ಯಾಪ್ತಿಯಲ್ಲಿ ಮೂಡಬಿದ್ರೆ ಬಸ್‌ಸ್ಟ್ಯಾಂಡ್ ಪಕ್ಕದಲ್ಲಿ ಪುರಸಭೆಗೆ ಸೇರಿದ ಜಾಗದಲ್ಲಿ ಎ.ಪಿ.ಎಂ.ಸಿ ಅನುದಾನದಲ್ಲಿ ಒಟ್ಟು 10 ಅಂಗಡಿ ಮಳಿಗೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. 50:50 ಅನುಪಾತದಂತೆ ಒಟ್ಟು 10 ಮಳಿಗೆಗಳ ಪೈಕಿ 05 ಮಳಿಗೆಗಳನ್ನು ಮೂಡಬಿದ್ರೆ ಪುರಸಭೆಯವರು ಉಪಯೋಗಿಸುತ್ತಿದ್ದು ಉಳಿದ 05 ಮಳಿಗೆಗಳನ್ನು ಮಂಗಳೂರು ಸಮಿತಿಯ ವಶಕ್ಕೆ ನೀಡಲಾಗಿರುತ್ತದೆ. ಸಮಿತಿಯ ವಶದಲ್ಲಿರುವ ಒಟ್ಟು 05 ಮಳಿಗೆಗಳ ಪೈಕಿ ಒಂದು ಮಳಿಗೆಯನ್ನು ಆಡಳಿತ ಕಛೇರಿಯನ್ನಾಗಿ ಉಪಯೋಗಿಸಲಾಗುತ್ತಿದೆ. ಉಳಿದ 04 ಮಳಿಗೆಗಳನ್ನು 2012ರಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿನಲ್ಲಿ ವ್ಯವಹರಿಸುತ್ತಿರುವ ಲೈಸನ್ಸ್ ಹೊಂದಿರುವ ಪೇಟೆಕಾರ್ಯಕರ್ತರಿಗೆ ಟೆಂಡರ್-ಕಂ-ಬಹಿರಂಗ ಹರಾಜು ಮೂಲಕ ಆಸ್ತಿ ಹಂಚಿಕೆ ನಿಯಮಾವಳಿ-2004ರ ನಿಯಮ-14ರಡಿ ಲೀವ್ ಆಂಡ್ ಲೈಸನ್ಸ್ ಆಧಾರದ ಮೇಲೆ ಹಂಚಿಕೆ ಮಾಡಲಾಗಿರುತ್ತದೆ. ಪ್ರಸ್ತುತ ಸದರಿ ಮಳಿಗೆಗಳನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿನಲ್ಲಿ ವ್ಯವಹರಿಸುತ್ತಿರುವ ಲೈಸನ್ಸ್ ಹೊಂದಿರುವ ಪೇಟೆಕಾರ್ಯಕರ್ತರಿಗೆ ಆಸ್ತಿ ಹಂಚಿಕೆ ನಿಯಮಾವಳಿ-2004ರ ನಿಯಮ-13ರರನ್ವಯ ಜ್ಯೇಷ್ಠತೆಯ ಆಧಾರದ ಮೇಲೆ ಹಂಚಿಕೆಗೆ ಕ್ರಮ ವಹಿಸಲಾಗುತ್ತಿದೆ.

ಅಂಗಡಿ ಮಳಿಗೆಗಳನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿನಲ್ಲಿ ವ್ಯವಹರಿಸುತ್ತಿರುವ ಲೈಸನ್ಸ್ ಹೊಂದಿರುವ ಪೇಟೆಕಾರ್ಯಕರ್ತರಿಗೆ ಲೀವ್ ಆಂಡ್ ಲೈಸನ್ಸ್ ಆಧಾರದ ಮೇಲೆ ಹಂಚಿಕೆ ಮಾಡುವ ಉದ್ದೇಶದಿಂದ ನಿರ್ಮಿಸಲಾಗಿದ್ದು, ಅದೇ ಉದ್ದೇಶಕ್ಕಾಗಿಯೇ ಬಳಸಲಾಗುತ್ತಿದ್ದು, ಯಾವುದೇ ಅಕ್ರಮ ನಡೆದಿರುವುದಿಲ್ಲ.

**(ಸಂಖ್ಯೆ:ಸಿಒ 490 ಎಂಆರ್‌ಇ 2020)**

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು